# ಪತ್ರಿಕಾ ಪ್ರಕಟಣೆ

ಕರ್ನಾಟಕ ವಾಣಿಜ್ಯ ತೆರಿಗೆ ಇಲಾಖೆ, ಜಾರಿ ವಿಭಾಗ, ದಕ್ಷಿಣ ವಲಯ ಬೆಂಗಳೂರು, ಕಬ್ಬಿಣ ಮತ್ತು ಉಕ್ಕು ಹಾಗೂ ಸ್ಕ್ರ್ಯಾಪ್ ವಲಯದಲ್ಲಿನ ಬೆಂಗಳೂರು ಹಾಗೂ ಸುತ್ತಮುತ್ತಲಿನ ಪ್ರದೇಶದ 86 ಕ್ಕೂ ಹೆಚ್ಚು ವರ್ತಕರ ಮೇಲೆ ದಾಳಿ ನಡೆಸಿ, ನಕಲಿ ಹೂಡುವಳಿ ತೆರಿಗೆ ಜಮೆಯನ್ನು (ಐಟಿಸಿ) ಬಳಸಿಕೊಂಡು ಸರ್ಕಾರದ ಬೊಕ್ಕಸಕ್ಕೆ ತೆರಿಗೆಯನ್ನು ವಂಚಿಸಿ ನಷ್ಟವನ್ನುಂಟು ಮಾಡುತ್ತಿರುವುದನ್ನು ಭೇದಿಸಲು ಯಶಸ್ವಿಯಾಗಿದೆ. ಸದರಿ ಜಿಎಸ್‌ಟಿ ತನಿಖೆಯು, ನಕಲಿ ಬಿಲ್ಲುಗಳನ್ನು ವ್ಯವಸ್ಥಿತವಾಗಿ ಸೃಷ್ಟಿಸಿ ತೆರಿಗೆಯನ್ನು ತಪ್ಪಿಸುತ್ತಿದ್ದ ವ್ಯವಸ್ಥಿತ ಜಾಲವನ್ನು ಬಯಲಿಗೆಳೆದಿದೆ. ಎಲ್ಲಾ ವಂಚಕರ ಸಮಗ್ರ ತಪಾಸಣೆಯನ್ನು ಕೈಗೊಳ್ಳಲು ಎರಡು ತಿಂಗಳ ಅವಧಿಯಲ್ಲಿ ಕಾರ್ಯಾಚರಣೆಯನ್ನು ನಡೆಸಲಾಯಿತು ಮತ್ತು ಸದರಿ ವಂಚಕರ ವ್ಯಾಪಾರ ಸ್ಥಳಗಳ ಹೆಚ್ಚಿನ ತಪಾಸಣೆಯನ್ನು ಕೂಡ ನಡೆಸಲಾಗುತ್ತದೆ.

ಸದರಿ ವರ್ತಕ ವೃಂದವು, ಹೂಡುವಳಿ ತೆರಿಗೆ ಜಮೆ (ಐಟಿಸಿ)ಯನ್ನು ಕೃತಕವಾಗಿ ಸೃಷ್ಟಿಸುತ್ತಿದ್ದ ವ್ಯವಸ್ಥಿತ ರೀತಿಯು ಕುತೂಹಲಕಾರಿಯಾಗಿದೆ. ಇಲಾಖೆಯಿಂದ ಈಗಾಗಲೇ ನೋಂದಣಿ ಅಮಾನತ್ತಿನಲ್ಲಿರುವ ಅಥವಾ ರದ್ದುಗೊಂಡಿರುವ ಜಿಎಸ್‌ಟಿಐಎನ್ ಸಂಖ್ಯೆಗಳನ್ನು ಬಳಸಿಕೊಂಡು ಅವುಗಳಿಂದ ಕೃತಕ ಖರೀದಿ ಬಿಲ್ಲುಗಳನ್ನು ಸೃಜಿಸಿ ಅವುಗಳಿಂದ ಐಟಿಸಿಯನ್ನು ಪಡೆದುಕೊಂಡು ತೆರಿಗೆಯನ್ನು ಪಾವತಿಸದೇ ವಂಚಿಸುತ್ತಿದ್ದರು. ಇದರ ಜೊತೆಗೆ ಕೆಲವೊಂದು ಫೋರ್ಜರಿ ದಾಖಲೆಗಳನ್ನು ಸೃಷ್ಟಿಸಿ ಅವುಗಳ ಮೂಲಕ ಮೋಸದಿಂದ ನೋಂದಣಿ ಪಡೆದು, ಯಾವುದೆ ವ್ಯವಹಾರ ಸ್ಥಳಗಳನ್ನು ಹೊಂದಿಲ್ಲದೇ ನಕಲಿ ಖರೀದಿ ಬಿಲ್ಲುಗಳನ್ನು ನೀಡುವುದರ ಮೂಲಕ ತೆರಿಗೆ ತಪ್ಪಿಸುವಿಕೆಯಲ್ಲಿ ಭಾಗವಹಿಸುತ್ತಿದ್ದಿದ್ದು ತನಿಖೆಯಿಂದ ಬಹಿರಂಗಗೊಂಡಿದೆ.

ಈ ವ್ಯವಸ್ಥಿತವಾದ ನಕಲಿ ಬಿಲ್ಲಿನಿಂದ ಒಟ್ಟು ರೂ 352 ಕೋಟಿಗೂ ಹೆಚ್ಚು ವಹಿವಾಟನ್ನು ಕೃತಕವಾಗಿ ಸೃಷ್ಟಿಸಿ, ಅಂದಾಜು ರೂ 64 ಕೋಟಿಯಷ್ಟು ನಕಲಿ ಐಟಿಸಿಯನ್ನು ಬಳಿಸಿಕೊಂಡು ಸರ್ಕಾರದ ಬೊಕ್ಕಸಕ್ಕೆ ತೆರಿಗೆ ವಂಚನೆ ಮಾಡಿರುವುದನ್ನು ತನಿಖೆಯಿಂದ ಪತ್ತೆಹಚ್ಚಲಾಗಿದೆ. ಸದರಿ ತನಿಖೆಯು ಸರ್ಕಾರದ ಆದಾಯವನ್ನು ಸಂರಕ್ಷಿಸಲು ಇಲಾಖೆಯು ಕಠಿಣ ಜಾರಿ ಕ್ರಮಗಳನ್ನು ಕೈಗೊಳ್ಳುತ್ತದೆ ಎನ್ನುವುದನ್ನು ಎತ್ತಿಹಿಡಿಯುತ್ತದೆ. ತನಿಖೆಯು ಮತ್ತಷ್ಟು ಪ್ರಗತಿಯಲ್ಲಿದೆ.

ನಕಲಿ ಬಿಲ್ಲು ತಯಾರಿಕೆ ಹಾಗೂ ತೆರಿಗೆ ತಪ್ಪಿಸುವಿಕೆಯು ಜಿ.ಎಸ್.ಟಿ ಕಾನೂನಿನಡಿ ಶಿಕ್ಷಾರ್ಹ ಅಪರಾಧವಾಗಿದ್ದು, ಜುಲ್ಮಾನೆ ವಿಧಿಸುವಿಕೆ, ಸರಕುಗಳ ಮುಟ್ಟುಗೋಲು, ಸ್ವತ್ತುಗಳ ಮತ್ತು ಬ್ಯಾಂಕ್ ಖಾತೆಗಳ ಮುಟ್ಟುಗೋಲು ಮುಂತಾದ ಕಟ್ಟುನಿಟ್ಟಿನ ಕಾನೂನು ಕ್ರಮಗಳನ್ನು ಕೈಗೊಳ್ಳುವುದನ್ನು ಒಳಗೊಂಡಿರುತ್ತದೆ.

ತೆರಿಗೆ ವಂಚನೆಯನ್ನು ತಡೆಯುವ ತನ್ನ ನಿರಂತರ ಪ್ರಯತ್ನಗಳ ಭಾಗವಾಗಿ ಇಲಾಖೆಯು ಈ ರೀತಿಯಾಗಿ ಮೋಸದ ಚಟುವಟಿಕೆಗಳಲ್ಲಿ ತಪ್ಪಿತಸ್ಥರ ವಿರುದ್ಧ ಕಠಿಣ ಕಾನೂನು ಕ್ರಮಗಳನ್ನು ತೆಗೆದುಕೊಳ್ಳುತ್ತದೆ. ತೆರಿಗೆ ವಂಚನೆಗೆ ಸಂಬಂಧಿಸಿದ ಯಾವುದೇ ಅನುಮಾನಾಸ್ಪದ ಚಟುವಟಿಕೆಗಳ ಬಗ್ಗೆ ಜಾಗರೂಕರಾಗಿರಿ ಮತ್ತು ಮಾಹಿತಿಗಳಿದ್ದಲ್ಲಿ, ವರದಿ ಮಾಡಲು ವಾಣಿಜ್ಯ ತೆರಿಗೆ ಇಲಾಖೆಯು ಸಾರ್ವಜನಿಕರಲ್ಲಿ ಮನವಿ ಮಾಡುತ್ತದೆ.

ಶಿಖಾ ಸಿ. ಭಾ.ಆ. ಸೇ.
ವಾಣಿಜ್ಯ ತೆರಿಗೆಗಳ ಆಯುಕ್ತರು (ಕರ್ನಾಟಕ)

ವಾಣಿಜ್ಯ ತೆರಿಗೆಗಳ ಆಯುಕ್ತರು
(ಕರ್ನಾಟಕ) ಬೆಂಗಳೂರು